ಶ್ರೀ ಡಿ. ಪರಮೇಶ್ವರಪ್ಪ.—ಈಗಾಗಲೆ ಹೇಳಿದಂತೆ ಭೂಸ್ವಾಧೀನಪಡಿಸಿಕೊಳ್ಳಲು ತೊಂದರೆಯಾಗಿದೆ. ಆದುದರಿಂದ ಸ್ವಲ್ಪ ನಿಧಾನವಾಗುವುದು. ಆ ಬಗ್ಗೆ ಏನಾದರೂ ವಿಷಯವನ್ನು ಪಾರ್ಟಿಗಳಿಗೆ ಮನವರಿಕೆ ಮಾಡಿ ಜಮೀನನ್ನು ಕೊಡಲು ಅವರು ಮುಂದೆ ಬರುವಂತೆ ಮಾಡಿದರೆ ತ್ವರಿತವಾಗಿ ಕೆಲಸ ತೆಗೆದುಕೊಳ್ಳಬಹುದೇ.

ಶ್ರೀ ಡಿ. ಎಂ. ಸಿದ್ದಯ್ಯ.—ಉತ್ತರದಲ್ಲಿ ಕಾಮಗಾರಿಯನ್ನು ಅವುಗಳಿಂದ ಪ್ರಯೋಜನ ಪಡೆಯುವವರೇ ಕೈಕೊಳ್ಳಬೇಕು ಎಂದು ತಿಳಿಸಲಾಗಿದೆ. ಅದಕ್ಕೆ ಬದಲಾಗಿ ಸರಕಾರದ ಮೂಲಕವೇ ಕೆಲಸಮಾಡಿ ವಾಟರ್ ರೇಟ್ ವಗೈರೆ ವಸೂಲುಮಾಡುವುದು ಸೂಕ್ತವಲ್ಲವೇ ?

Sri D. PARAMESWARAPPA.—The tank irrigates only 20 acres. Therefore, the beneficiaries should pay.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಹತ್ತು ವರ್ಷವಾದರೂ ಜಮೀನನ್ನು ಅಕ್ವೈರ್ ಮಾಡಿಕೊಳ್ಳದಿರುವುದನ್ನು ನೋಡಿದರೆ ಸರಕಾರಕ್ಕೆ ಶಕ್ತಿಯಿಲ್ಲವೇ ಅಥವಾ ಮನಸ್ಸಿಲ್ಲವೆ ? ಕಾನೂನು ಪ್ರಕಾರ ಅದಷ್ಟು ಜಾಗ್ರತೆ ಅಕ್ವೈರ್ ಮಾಡಿ ಜಾಗ್ರತೆ ರೈತರಿಗೆ ಅನುಕೂಲ ಮಾಡಲಾಗುವುದೇ ?

ಶ್ರೀ ಡಿ. ಪರಮೇಶ್ವರಪ್ಪ.—ಆಸಕ್ತಿ ಇದೆ, ಅದಷ್ಟು ಜಾಗ್ರತೆ ಸ್ವಾಧೀನ ಪಡಿಸಿಕೊಳ್ಳಬೇಕೆಂದಿದ್ದೇವೆ. ಆದರೆ ಕೆಲವು ಸಂದರ್ಭಗಳಲ್ಲಿ ತೊಂದರೆಗಳು ಬರುವುದರಿಂದ ನಿಧಾನವಾಗುವುದು ಸ್ವಾಭಾವಿಕ.

Mr. SPEAKER.—The Hon. Chief Minister has requested me to hold over question No. 807 and therefore it is held over.

Sri D. PARAMESWARAPPA.—Sir, I will answer this question, Sir.

Mr. SPEAKER.—Then it is all right, the member may put the question.

The Security Guards employed in Sharavathy Valley Project

807. Sri K. H. SRINIVAS (Sagar).—

Will the Chief Minister be pleased to state :—

(*a*) the number of Security Guards employed in the Sharavathy Valley Project ;

(*b*) the purpose for which they are maintained ;

(*c*) their pay scales, duties and other facilities such as quarters, etc. ;

(*d*) the total expenditure on them per annum ;

(*e*) whether such security guards are maintained in similar other projects ?

Sri D. PARAMESWARAPPA (Deputy Minister for Major irrigation and Electricity) [On behalf of SRI VEERENDRA PATIL (Chief Minister)].—

(*a*) 81.

(*b*) To guard the safety of vital installations by preventing the entry of unauthorised persons

(*c*) *1. Pay Scales* :—

Rs. 50-1-60 *plus* D.A. and Project Allowance at 20 per cent of the pay.

2. Duties :—

Vide reply to clause (*b*) of the question.

3. Rent-free quarters subject to availability and free to and fro conveyance.

(*d*) Rs. 1,13,000 for the current year.

(*e*) Yes.

ಶ್ರೀ ಕೆ. ಎಚ್. ಶ್ರೀನಿವಾಸ.—ರಕ್ಷಣಾ ದಳದವರೇನು 81 ಮಂದಿ ಇದ್ದಾರೆ ಅವರಿಗೆ ಯಾವುದಾದರೂ ರೀತಿಯಲ್ಲಿ ವಿಶೇಷ ತರಬೇತಿ ಕೊಡರಾಗಿದೆಯೇ ? ಕೇವಲ ವಿದ್ಯುತ್ ಸಲಕರಣೆಗಳನ್ನು ನೋಡಿಕೊಳ್ಳುವುದಷ್ಟೇ ಕೆಲಸವೋ ? ಅವರಿಗಿರುವುದು ಅಥವಾ ಡ್ಯಾಮನ್ನು ಸಹ ನೋಡಿಕೊಳ್ಳುವರೋ ?

ಶ್ರೀ ಡಿ. ಪರಮೇಶ್ವರಪ್ಪ.—ಸ್ಪೆಷರ್ ಆಫೀಸರಿದ್ದಾರೆ, ಅವರು ತರಬೇತಿ ಕೊಡುವುದು ಸೆಕ್ಯೂರಿಟಿ ವಿಚಾರದಲ್ಲ. ಅವರು ಶರಾವತಿ ವ್ಯಾಲಿ, ಮಹಾತ್ಮ ಗಾಂಧಿ ಎರೆಕ್ಟ್ರಿಕ್ ಪ್ರಾಜೆಕ್ಟ್ ಮತ್ತು ಡ್ಯಾಂ ನೋಡಿಕೊಳ್ಳುವರು.

ಶ್ರೀ ಕೆ. ಎಚ್. ಶ್ರೀನಿವಾಸ.—ಅವರಿಗೆ ಆಯುಧವನ್ನೇನಾದರೂ ಕೊಡರಾಗಿದೆಯೇ ?

Sri D. PARAMESWARAPPA.—These security men are not the persons to be harmed by anybody and therefore they have not been armed.

ಶ್ರೀ ಕೆ. ಎಚ್. ಶ್ರೀನಿವಾಸ.—ಅವರಿಗೆ ಆಯುಧಗಳನ್ನು ಕೊಟ್ಟಿಲ್ಲದಿರುವುದರಿಂದ ವಿದ್ಯುತ್ ಆಗಾರಕ್ಕೆ ಅಥವಾ ಡ್ಯಾಮಿಗೆ ಧಕ್ಕೆ ಬರುವುವಾದರೆ ಅದಕ್ಕೆ ಅವಕಾಶವಿಲ್ಲದಂತೆ ತಕ್ಕ ಬಂದೋಬಸ್ತು ಮಾಡುತ್ತೀರಾ ?

Sri D. PARAMESWARAPPA.—Apart from these people there are other Police staff also. If these people are informed, they will take immediate action.

ಶ್ರೀ ಎಸ್. ಬಂಗಾರಪ್ಪ.—ಇದು ಬಹಳ ಮುಖ್ಯವಾಗಿರುವುದರಿಂದ ಮತ್ತು ಈಗಿರುವ ಸಿಬ್ಬಂದಿ ಗಾರ್ಡ್ ಮಾಡಲು ಕಡಿಮೆ ಇರುವುದರಿಂದ ಹೆಚ್ಚು ಇರಾಖೆ ಜನರನ್ನು ಟರ್ಮಿನೇಟ್ ಮಾಡಿದಾಗ ಅವರನ್ನು ಕೆಲಸಕ್ಕೆ ತೆಗೆದುಕೊಂಡು ಹೆಚ್ಚು ರಕ್ಷಣೆಗೆ ಅವಕಾಶ ಮಾಡುವಿರಾ ?

ಶ್ರೀ ಡಿ. ಪರಮೇಶ್ವರಪ್ಪ.—ಹೆಚ್ಚು ಸರ್ವೀಸಸ್‌ನಲ್ಲಿ 27 ಜನರನ್ನು ಈಗಾಗಲೇ ರಿಟ್ರೆಂಚ್ ಮಾಡುವುದಕ್ಕೆ ಸರ್ಕಾರ ನಿರ್ಧಾರ ಮಾಡಿದೆ. ಅವರನ್ನು ಅಬ್‌ಸಾರ್ಬ್ ಮಾಡುವ ಉದ್ದೇಶ ಇಲ್ಲ, ಅದಕ್ಕೆ ಬೇರೆ ಕ್ರಮ ಕೈಕೊಂಡಿದ್ದೇವೆ. ಸೆಕ್ಯೂರಿಟಿ ವಾಚಮನ್ ಆಗಿ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಸಾಕಷ್ಟು ಸಂಖ್ಯೆ ಇರುವುದರಿಂದ ಇದರಲ್ಲಿ ಅವಕಾಶವಾಗುವುದಿಲ್ಲ.

ಶ್ರೀ ಎಂ. ಎಂ. ಜಾಲಿಕಟ್ಟಿ.—ಈಗ ತಾವು ಹಣದ ತುರ್ತಾಗ್ರತೆಯಲ್ಲಿರುವುದರಿಂದ ರಕ್ಷಣಾ ದಳದವರು ಕೆಲವರನ್ನು ವಾತ್ಸ ಇಟ್ಟುಕೊಂಡು – ಹೆಚ್ಚು ಇರತಕ್ಕ ಜನರಿಗೆ ಬದರಾಗಿ ಅಲ್‌ಸೇಷಿಯನ್ ನಾಯಿಗಳನ್ನು ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಅದರಿಂದ ಖರ್ಚು ಕಡಿಮೆಯಾಗುತ್ತದೆ.

Sri D. PARAMESWARAPPA.—It is nowhere stated that the staff si in excess. It is just sufficient.

ಶ್ರೀ ಪಿ. ಎನ್. ಪಾಟೀರ್.—ಈ ಪ್ರಾಜೆಕ್ಟ್‌ನ ಲ್ಲಿ ಸೆಕ್ಯೂರಿಟಿ ಆಫೀಸರನ್ನು ನೇಮಕ ಮಾಡಿದ್ದೀರಿ. ಈಗ ಯಾರನ್ನು ನೇಮಕ ಮಾಡಿದ್ದೀರೋ ಅವರು ಬಿವರ್ ರಿಜ್ಯೂರ್ಡ್ ಎಸ್. ಪಿ. ಆಗಿದ್ದರು. ಆಗ ಅವರು ಅನೇಕ ದುರ್ವ್ಯವಹಾರಗಳನ್ನು ಮಾಡಿ ಪಾಕೀಸ್ತಾನದ ಸ್ಪೈ ಆಗಿ ಕೆಲಸ ಮಾಡುತ್ತಾ ಇದ್ದರು ಎಂಬುದು ತಮ್ಮ ನೋಟೀಸಿಗೆ ಬಂದಿದೆಯೇ ಇಂತಹವರನ್ನು ಸೆಕ್ಯುರಿಟಿ ಆಫೀಸರಾಗಿ ನೇಮಕ ಮಾಡಿದರೆ ಪ್ರಾಜೆಕ್ಟು ಉಳಿಯುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ? ಅವರ ಹೆಸರು ಶ್ರೀನಿವಾಸನ್ ಅಂತ.

Sri D. PARAMESWARAPPA.—At present I have no information about the name of the person. After knowing the name of the person correctly, I will intimate in due course.

Sri D. B. KALMANKAR.—You said there is Police staff also. When the police staff is there, will it not be useless to have these 81 persons who are not armed and adequately trained ?

Sri D. PARAMESWARAPPA.—That is not the point. The main object with which they are posted is just to protect the vital installations and to prevent unauthorised entry into the premises.

ಶ್ರೀ ಸಿದ್ಧಯ್ಯ ಕಾಶೀಮಠ.— ಈ ರಕ್ಷಣಾದಳದವರು ಯಾವ ಆಡಳಿತಕ್ಕೆ ಒಳಪಟ್ಟು ಕೆಲಸ ಮಾಡುತ್ತಾ ಇರ್ತಾರೆ ? ಪೋಲೀಸೋ ಅಥವಾ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಕೆಲಸ ಮಾಡುತ್ತಾ ಇದ್ದಾರೋ ?

Sri D. PARAMESWARAPPA.—The Electricity Board has placed these watchmen at the disposal of the Security Officer. They come under the control of the Security Officer.

ಶ್ರೀ ಬಿ. ಎಂ. ಇದಿನಬ್ಬ.—ಈ ಜನರು ಸರಿಯಾಗಿ ಹಾಜರಾಗುತ್ತಾರೆಯೇ, ಒಳ್ಳೆಯರೀತಿಯಲ್ಲಿ ಕೆಲಸ ಮಾಡುತ್ತಾರೆಯೇ ಎಂಬುದನ್ನು ಯಾರಾದರೂ ತನಿಖೆ ಮಾಡಿದ್ದು ಉಂಟೆ ಎಂದು ಕೇಳುತ್ತೇನೆ ?

ಶ್ರೀ ಡಿ. ಪರಮೇಶ್ವರಪ್ಪ.— ಅವರು ಕೆಲಸ ಮಾಡುವುದನ್ನು ಆಗಾಗ್ಗೆ ತನಿಖೆ ಮಾಡುವುದಕ್ಕೆ ಸೆಕ್ಯೂರಿಟಿ ಆಫೀಸರು ಇದ್ದಾರೆ ಅವರು ಮಾಡುತ್ತಾರೆ. ಒಂದುವೇಳೆ ಕೆಲಸದಲ್ಲಿ ನ್ಯೂನತೆ ಇದ್ದರೆ ರಿಪೋರ್ಟ್ ಮಾಡುತ್ತಾರೆ, ಅಂತಹವರನ್ನು ತೆಗೆದುಹಾಕುತ್ತಾರೆ.

ಶ್ರೀ ಸಿ. ಎಂ. ಎಸ್. ಶಂಸ್ಕ್ರಿ.—ಪೋಲೀಸ್‌ನವರು ಯಾರಿದ್ದಾರೆ ಇವರಿಗೆ ಎಷ್ಟು ಹಣ ಖರ್ಚಾಗುತ್ತಾ ಇದೆ ?

Sri D. PARAMESWARAPPA.—I have no figures in detail. I have got only the total figures.

ಶ್ರೀ ಕೆ. ಎಚ್. ಶ್ರೀನಿವಾಸ.—ಈಗ ಜನರೇಟಿಂಗ್ ಸ್ಟೇಷನ್‌ಗೆ ಎಲ್ಲರೂ ಹೋಗಲಿಕ್ಕೆ ಸಾಧ್ಯವಿಲ್ಲ, ಗೇಟ್ ಇದೆ, ಚೆಕ್ ಇದೆ, ಪರ್ಮಿಷನ್ ತೆಗೆದುಕೊಳ್ಳಬೇ ಯಾರಿಗೂ ಹೋಗುವುದಕ್ಕೆ ಆಗುವುದಿಲ್ಲ. ಆದರೂ ಕೂಡ ಅನ್‌ಆಥರೈಸ್ಡ್ ಎಂಟ್ರಿಯನ್ನು ತಡೆಗಟ್ಟುತ್ತಾ ಇಲ್ಲ. ನನ್ನ ದೃಷ್ಟಿಯಿಂದ, ಸ್ಥಳಾಂದಿಗನಾಗಿ ನಾನು ಹೇಳುವುದೇನೆಂದರೆ ಯಾವ ಒಂದು ಉದ್ದೇಶದಿಂದ ಇವರನ್ನು ಇಟ್ಟಿದ್ದಾರೋ ಅದು ಸಫಲವಾಗುತ್ತಾ ಇಲ್ಲ. ಆದ್ದರಿಂದ ಇದನ್ನು ದಯವಿಟ್ಟು ಪುನರ್ವಿಮರ್ಶೆ ಮಾಡಿ ಎಷ್ಟು ಅವಶ್ಯಕತೆ ಇದೆ ಯಾವ ಸ್ವರೂಪದ ಸೆಕ್ಯೂರಿಟಿ ಅವಶ್ಯಕತೆ ಇದೆ ಅದನ್ನು ಪ್ರೊವೈಡ್ ಮಾಡುವುದಕ್ಕೆ ನಿಗಾ ಕೊಡಬೇಕು, ಪುನರ್ವಿಮರ್ಶೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

Sri D. PARAMESWARAPPA.—If it is reported that security measures now adopted are not sufficient, we will have to reconsider and make arrangements.